ಉಪತಹಶೀಲ್ದಾರವರ ನ್ಯಾಯಾಲಯ ನಾಡ ಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾ.ಕ.ಹೊ/74/2015-16 ದಿನಾಂಕ:05-04-2016

| ಅರ್ಜಿದಾರರು | ತಕರಾರುದಾರರು |
|---|---|
| 1)ಬಸಮ್ಮ ಗಂಡ ಲೇಟ್ ಸಣ್ಣ ಸಿದ್ದಪ್ಪ<br>2)ಅಂಜೀನಮ್ಮ ಗಂಡ ಲೇಟ್ ಸಣ್ಣ ಮಲಿಯಪ್ಪ<br>3)ಕ್ಯಾರಕಟ್ಟೆಪ್ಪ ತಂದೆ ಲೇಟ್ ಗುರುವಪ್ಪ<br>ಗಂಗಮ್ಮನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಹೊಸಹಳ್ಳಿ |
| ಕೂಡ್ಲಿಗಿ ತಾಲೂಕು ಸುಂಕದಕಲ್ಲು ಗ್ರಾಮದ ಸನಂ 39. 40ಬಿ. 71ಬಿ. ವಿಸ್ತೀರ್ಣ 13-19. 1-42. 6-88 ಎಕ್ರೆ ಜಮೀನುಗಳನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಸುಂಕದಕಲ್ಲು ಗ್ರಾಮದ ಸನಂ 39. 40ಬಿ. 71ಬಿ. ವಿಸ್ತೀರ್ಣ 13-19. 1-42. 6-88 ಎಕ್ರೆ ಜಮೀನುಗಳನ್ನು ಸದರಿ ತಾಲೂಕು ಗಂಗಮ್ಮನಹಳ್ಳಿ ಗ್ರಾಮದ ಕ್ಯಾರಕಟ್ಟೆಪ್ಪ ತಂದೆ ಲೇಟ್ ಗುರುವಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಸುಂಕದಕಲ್ಲು ಇವರು ನಮೂನೆ-21 ರ ನೋಟಿಸನ್ನು ದಿನಾಂಕ: 14-01-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಅರ್ಜಿದಾರರು ಮರಣ ಪ್ರಮಾಣ ಪತ್ರ ದೃಡಿಕೃತ ಪ್ರತಿ ಸಲ್ಲಿಸಿಲ್ಲದ ಕಾರಣ ಈ ಪ್ರಕರಣದ ಎಂ.ಆರ್ ನಂ: 16/2014-15. ದಿನಾಂಕ:15-02-2015 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದೆಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 09-12-2015 ರಿಂದ 05-04-2016 ರ ವರೆಗೆ ವಿಚಾರಣೆ ಮಾಡಲಾಯಿತು

ವಿಚಾರಣೆಯ ಸಮಯದಲ್ಲಿ ಅರ್ಜಿದಾರರರಾದ ಕ್ಯಾರಕಟ್ಟೆಪ್ಪನ ಮಗ ಹಾಜರಾಗಿರುತ್ತಾರೆ. ಅರ್ಜಿದಾರರು ಸುಂಕದಕಲ್ಲು ಗ್ರಾಮದ ಸನಂ 39. 40ಬಿ. 71ಬಿ. ವಿಸ್ತೀರ್ಣ 13-19. 1-42. 6-88 ಎಕ್ರೆ ಜಮೀನುಗಳು ನಮ್ಮ ತಂದೆಯವರಾದ ಗಂಗಮ್ಮನಹಳ್ಳಿ ಗುರುವಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 19-03-1951 ರಂದು ಹಾಗೂ ನಮ್ಮ ತಾಯಿಯವರಾದ ಸಣ್ಣ ನಿಂಗಮ್ಮ ಗಂಡ ಗುರುವಪ್ಪ ಇವರು ಸಹಾ ನಿಧನ ಹೊಂದಿರುತ್ತಾರೆ. ಮತ್ತು ನನ್ನ ಒಂದನೆ ಅಣ್ಣನಾದ ಮಲಿಯಪ್ಪ ಇವರು ದಿನಾಂಕ 10-08-1981 ರಂದು ಹಾಗೂ ಎರಡನೇ ಅಣ್ಣನಾದ ಸಣ್ಣ ಸಿದ್ದಪ್ಪ ಇವರು ದಿನಾಂಕ 04-06-1989 ರಂದು ಮತ್ತು ಮೂರನೇ ಅಣ್ಣನಾದ ಕೊಬ್ಬು ಮಲಿಯಪ್ಪ ಇವರು ದಿನಾಂಕ 09-11-1988 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರು ಕೋರಿರುವಂತೆ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ವಾರಸು ಹಕ್ಕಿನಂತೆ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**-:ಆದೇಶ:-**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಸ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಸುಂಕದಕಲ್ಲು ಗ್ರಾಮದ ಸನಂ 39. 40ಬಿ. 71ಬಿ. ವಿಸ್ತೀರ್ಣ 13-19. 1-42. 6-88 ಎಕ್ರೆ ಜಮೀನುಗಳನ್ನು ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರಾದ ಬಸಮ್ಮ ಗಂಡ ಲೇಟ್ ಸಣ್ಣ ಸಿದ್ದಪ್ಪ. ಅಂಜಿನಮ್ಮ ಗಂಡ ಲೇಟ್ ಸಣ್ಣ ಮಲಿಯಪ್ಪ. ಕ್ಯಾರಕಟ್ಟೆಪ್ಪ ತಂದೆ ಲೇಟ್ ಗುರುವಪ್ಪ ಗಂಗಮ್ಮನಹಳ್ಳಿ ಗ್ರಾಮ ಇವರುಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 05-04-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಬಸಮ್ಮ ಗಂಡ ಲೇಟ್ ಸಣ್ಣ ಸಿದ್ದಪ್ಪ. ಅಂಜಿನಮ್ಮ ಗಂಡ ಲೇಟ್ ಸಣ್ಣ ಮಲಿಯಪ್ಪ. ಕ್ಯಾರಕಟ್ಟೆಪ್ಪ ತಂದೆ ಗುರುವಪ್ಪ. ಗಂಗಮ್ಮನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರವೀಕ್ಷಕರು ಹೊಸಹಳ್ಳಿ ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕೆ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.